ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 148-154
Bi-Monthly, Peer-Reviewed, Open Access, Indexed Journal

I S S N: 2583-3510

SIRDF JOURNALS
editor@srujani.in
www.srujani.in

ಭಾಷೆಯ ಬಗ್ಗೆ ಕುವೆಂಪು ಅವರ ಚಿಂತನೆಗಳು

ಡಾ. ಗುರುಸ್ವಾಮಿ ಆರ್
ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಮೈಸೂರು

Abstract:

ಮಾನವನ ನಾಗರಿಕತೆಯ ಬೆಳವಣಿಗೆಯಲ್ಲಿ ಭಾಷೆಯ ಪಾತ್ರ ಮಹತ್ವದ್ದಾಗಿದ್ದು, ತಾಯ್ನುಡಿಯು ವ್ಯಕ್ತಿಯ ಸಾಂಸ್ಕೃತಿಕ ಅಸ್ಮಿತೆಯ ಪ್ರಮುಖ ಸಂಕೇತವಾಗಿದೆ. ಈ ಲೇಖನವು ರಾಷ್ಟ್ರಕವಿ ಕುವೆಂಪು ಅವರ ಭಾಷೆ, ಕನ್ನಡ ನಾಡು–ನುಡಿ, ಕನ್ನಡ ಮಾಧ್ಯಮ ಮತ್ತು ಶಿಕ್ಷಣದ ಕುರಿತಾದ ಚಿಂತನೆಗಳನ್ನು ವಿಶ್ಲೇಷಿಸುತ್ತದೆ. ಕನ್ನಡ ಭಾಷೆಯ ಮೇಲೆ ಅನ್ಯಭಾಷೆಗಳ ಪ್ರಭಾವ, ಬಲವಂತದ ಭಾಷಾ ಕಲಿಕೆ ಹಾಗೂ ತ್ರಿಭಾಷಾ ಸೂತ್ರದ ಕುರಿತು ಕುವೆಂಪು ವ್ಯಕ್ತಪಡಿಸಿದ ನಿಲುವುಗಳನ್ನು ಅವರ ಕವನಗಳು ಮತ್ತು ಭಾಷಣಗಳ ಮೂಲಕ ಪರಿಚಯಿಸಲಾಗಿದೆ. ಮಾತೃಭಾಷೆಯ ಮೂಲಕ ಶಿಕ್ಷಣ ನೀಡುವ ಅಗತ್ಯ, ಕನ್ನಡದ ಸಾಂಸ್ಕೃತಿಕ ವೈಶಿಷ್ಟ್ಯ ಮತ್ತು ಭಾಷಾ ಸ್ವಾಭಿಮಾನದ ಮಹತ್ವವನ್ನು ಲೇಖನವು ಚರ್ಚಿಸುತ್ತದೆ. ಕುವೆಂಪು ಅವರ ಭಾಷಾ ಚಿಂತನೆಗಳು ಕನ್ನಡ ಭಾಷೆಯ ಅಭಿವೃದ್ಧಿ, ಕನ್ನಡ ಮಾಧ್ಯಮದ ಅನುಷ್ಠಾನ ಮತ್ತು ಕನ್ನಡಿಗರ ಭಾಷಾ ಪ್ರಜ್ಞೆಗೆ ಇಂದಿಗೂ ಮಾರ್ಗದರ್ಶಕವಾಗಿವೆ ಎಂಬುದನ್ನು ಈ ಅಧ್ಯಯನ ಪ್ರತಿಪಾದಿಸುತ್ತದೆ.

Keywords: *ಕುವೆಂಪು, ಕನ್ನಡ ಭಾಷೆ, ಮಾತೃಭಾಷೆ, ಕನ್ನಡ ಮಾಧ್ಯಮ, ಭಾಷಾ ಸ್ವಾಭಿಮಾನ.*

ಪೀಠಿಕೆ

ಮಾನವನ ಆವಿಷ್ಕಾರಗಳಲ್ಲೆಲ್ಲ ಭಾಷೆಯ ಬಳಕೆಯನ್ನು ಕಂಡುಕೊಂಡಿರುವುದು ಅತ್ಯಂತ ಅದ್ಭುತವಾದ ಮತ್ತು ಮಹತ್ವಪೂರ್ಣವಾದ ಸಾಧನೆಯಾಗಿದೆ ಎಂಬುದು ಡಾರ್ವಿನ್ ಅವರ ಅಭಿಪ್ರಾಯ. ಬೆಂಕಿಯ ಬಳಕೆಯನ್ನು ಕಂಡುಕೊಂಡ ಆದಿಮಾನವನು ನಾಗರಿಕತೆಯತ್ತ ಮೊದಲ ಹೆಜ್ಜೆಯಿಟ್ಟರೆ, ಭಾಷೆಯ ಬಳಕೆಯನ್ನು ರೂಢಿಸಿಕೊಂಡ ಮಾನವನು ತನ್ನ ಭಾವನೆ, ಅನುಭವ ಮತ್ತು ಜ್ಞಾನವನ್ನು ಇತರರೊಂದಿಗೆ ಹಂಚಿಕೊಳ್ಳುವ ಮೂಲಕ ನಾಗರಿಕತೆಯ ಬೆಳವಣಿಗೆಗೆ ಕಾರಣನಾದನು. ಇಂತಹ ಮಹತ್ವದ ಭಾಷೆಯನ್ನು ನಮ್ಮ ಹಿರಿಯರು ಬೆಳಕು, ಜ್ಯೋತಿ ಎಂದು ಕರೆದಿದ್ದಾರೆ.

ಕವಿರಾಜಮಾರ್ಗಕಾರನು ಕನ್ನಡಿಗರ ಗುಣವಿಶೇಷಗಳನ್ನು ವಿವರಿಸುವ ಸಂದರ್ಭದಲ್ಲಿ 'ಕಸವರಮೆಂಬುದು ನೆರೆ ಸೈರಿಸಲಾರ್ಪೊಡೆ ಪರವಿಚಾರಮಂ ಪರಧರ್ಮಮಂ' ಎಂಬ ಉದಾತ್ತ ಮೌಲ್ಯವನ್ನು ಪ್ರತಿಪಾದಿಸಿದ್ದಾನೆ. ಪರರ ವಿಚಾರ ಮತ್ತು ಪರಧರ್ಮಗಳನ್ನು ಸಹಿಸಿಕೊಳ್ಳುವ ಉದಾರ ಗುಣ ಕನ್ನಡಿಗರಲ್ಲಿದೆ ಎಂಬುದು ಇದರ ಆಶಯ. ಆದರೆ ಈ ಉದಾರ ಮನೋಭಾವವು ಕೆಲವೊಮ್ಮೆ ಕನ್ನಡ ಭಾಷೆಯ ಹಿತಾಸಕ್ತಿಗಳಿಗೆ ಧಕ್ಕೆಯಾಗುವ ಸಂದರ್ಭಗಳೂ ಎದುರಾಗಿವೆ.

ಇತ್ತೀಚಿನ ದಿನಗಳಲ್ಲಿ ಕನ್ನಡ ಭಾಷೆಯ ಬಳಕೆ ಮತ್ತು ಅದರ ಸ್ಥಾನಮಾನದ ಕುರಿತು ಹಲವು

Please cite this article as: ಗುರುಸ್ವಾಮಿ ಆರ್. (2026). ಭಾಷೆಯ ಬಗ್ಗೆ ಕುವೆಂಪು ಅವರ ಚಿಂತನೆಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್*, 5(3), 148–154

ಚರ್ಚೆಗಳು ನಡೆಯುತ್ತಿವೆ. ನಾಮಫಲಕಗಳಲ್ಲಿ ಕನ್ನಡ ಭಾಷೆಯ ಬಳಕೆಗೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರ ಕೈಗೊಂಡ ಕ್ರಮಗಳು, ಅವುಗಳ ಅನುಷ್ಠಾನ ಮತ್ತು ಕನ್ನಡದ ಸ್ಥಾನಮಾನದ ಕುರಿತು ಸಾರ್ವಜನಿಕ ವಲಯದಲ್ಲಿ ಚರ್ಚೆಗಳು ವ್ಯಕ್ತವಾಗಿವೆ. ಇಂತಹ ಸಂದರ್ಭಗಳಲ್ಲಿ ಕನ್ನಡ ಭಾಷೆಯ ಅಸ್ತಿತ್ವ, ಸ್ವಾಭಿಮಾನ ಮತ್ತು ಹಕ್ಕುಗಳ ಕುರಿತು ಕುವೆಂಪು ಅವರ ಚಿಂತನೆಗಳು ಮಹತ್ವ ಪಡೆದುಕೊಳ್ಳುತ್ತವೆ. ಕನ್ನಡಿಗರ ಭಾಷಾಭಿಮಾನವನ್ನು ಎಚ್ಚರಿಸುವ ಉದ್ದೇಶದಿಂದ ಕುವೆಂಪು ಅವರು,

"ನಿಮ್ಮ ನುಡಿ ನಿಮ್ಮ ಗಂಡುಸತನಕ್ಕೆ ಹಿರಿಸಾಕ್ಷಿ;
ಗೆಲವಿದ್ದರೆ ಅದಕೆ ನಿಮಗಿಹುದು ಶಕ್ತಿ"

ಎಂದು ಕರೆ ನೀಡಿದ್ದಾರೆ. ಕನ್ನಡ ಭಾಷೆಯ ಉಳಿವು ಮತ್ತು ಬೆಳವಣಿಗೆಗೆ ಕನ್ನಡಿಗರ ಆತ್ಮವಿಶ್ವಾಸ, ಬದ್ಧತೆ ಹಾಗೂ ಕ್ರಿಯಾಶೀಲತೆ ಅಗತ್ಯವೆಂಬುದನ್ನು ಈ ಮಾತುಗಳು ಸೂಚಿಸುತ್ತವೆ.

ಕನ್ನಡ ನಾಡು–ನುಡಿಯ ಬಗ್ಗೆ ಕುವೆಂಪು ಅವರ ಅಭಿಮಾನ

ಯಾವುದೇ ಕವಿಗೆ ಸಹಜವಾಗಿ ತನ್ನ ತಾಯ್ನಾಡು ಮತ್ತು ತಾಯ್ನುಡಿಯ ಬಗ್ಗೆ ವಿಶೇಷ ಅಭಿಮಾನ ಹಾಗೂ ಕಾಳಜಿ ಇರುತ್ತದೆ. ಈ ಅಭಿಮಾನ ಮತ್ತು ಕಾಳಜಿಗಳು ಕನ್ನಡ ಸಾಹಿತ್ಯದಲ್ಲಿಯೂ ವಿವಿಧ ಕಾಲಘಟ್ಟಗಳಲ್ಲಿ ವ್ಯಕ್ತವಾಗಿವೆ. ಕವಿರಾಜಮಾರ್ಗದಿಂದ ಆರಂಭಿಸಿ ಆಧುನಿಕಪೂರ್ವ ಕಾಲದವರೆಗೂ ಕನ್ನಡ ನಾಡು–ನುಡಿಯ ಹಿರಿಮೆಯನ್ನು ಕವಿಗಳು ತಮ್ಮ ಕೃತಿಗಳಲ್ಲಿ ಅಭಿಮಾನದಿಂದ ಬಣ್ಣಿಸಿದ್ದಾರೆ. ಆದರೆ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಈ ವಿಷಯವು ಹೆಚ್ಚು ವ್ಯಾಪಕವಾಗಿ ಮತ್ತು ಪ್ರಬಲವಾಗಿ ಅಭಿವ್ಯಕ್ತಗೊಂಡಿದೆ. ಪಂಜೆ ಮಂಗೇಶರಾಯರು, ಬಿ.ಎಂ.ಶ್ರೀ., ಕುವೆಂಪು, ಡಿ.ಎಸ್. ಕರ್ಕಿ, ಅನಕೃ ಮತ್ತು ನಿಸಾರ್ ಅಹಮದ್ ಮೊದಲಾದ ಸಾಹಿತಿಗಳು ಕನ್ನಡ ನಾಡು–ನುಡಿಯ ಬಗ್ಗೆ ತಮ್ಮ ಕೃತಿಗಳಲ್ಲಿ ವಿಶೇಷ ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹತ್ತನೆಯ ಶತಮಾನವನ್ನು ಪಂಪಯುಗವೆಂದು ಗುರುತಿಸುವಂತೆ, ಇಪ್ಪತ್ತನೆಯ ಶತಮಾನವನ್ನು ಕುವೆಂಪು ಯುಗವೆಂದೂ ಕರೆಯಲಾಗಿದೆ. ಕನ್ನಡ ಸಾಹಿತ್ಯಕ್ಕೆ ಕುವೆಂಪು ಅವರು ನೀಡಿದ ಕೊಡುಗೆ ಅಪಾರವಾದುದು. ಕನ್ನಡ ಭಾಷೆ ಮತ್ತು ಕುವೆಂಪು ಅವರ ಸಾಹಿತ್ಯವನ್ನು ಪರಸ್ಪರ ಬೇರ್ಪಡಿಸಲಾಗದಷ್ಟು ಗಾಢವಾದ ಸಂಬಂಧವಿದೆ. ಕನ್ನಡವೇ ಕುವೆಂಪು ಅವರ ಸಾಹಿತ್ಯದ ಮೂಲಧಾತುವಾಗಿದೆ.

'ಹೆತ್ತ ತಾಯಿ ಮತ್ತು ಹೊತ್ತ ನಾಡು ಸ್ವರ್ಗಕ್ಕಿಂತಲೂ ಮಿಗಿಲು' ಎಂಬ ಭಾವನೆ ಭಾರತೀಯ ಸಾಹಿತ್ಯ ಪರಂಪರೆಯಲ್ಲಿಯೇ ಕಾಣಸಿಗುತ್ತದೆ. ಇದೇ ಆಶಯವನ್ನು ಕುವೆಂಪು ಅವರು ತಮ್ಮ ಕಾವ್ಯದಲ್ಲಿ ಇನ್ನಷ್ಟು ಪರಿಣಾಮಕಾರಿಯಾಗಿ ವ್ಯಕ್ತಪಡಿಸಿದ್ದಾರೆ.

"ಈ ದೇಶ ನನ್ನದು, ನಾಡು ನನ್ನದು ಎನ್ನದ
ಮಾನವನ ಎದೆ ಸುಡುಗಾಡು"

ಎಂಬ ಅವರ ಕರೆ ತಾಯ್ನಾಡಿನ ಬಗ್ಗೆ ಪ್ರತಿಯೊಬ್ಬರಲ್ಲಿಯೂ ಇರಬೇಕಾದ ಅಭಿಮಾನ ಮತ್ತು ಜವಾಬ್ದಾರಿಯನ್ನು ನೆನಪಿಸುತ್ತದೆ.

ಕುವೆಂಪು ಅವರ ಕರ್ನಾಟಕದ ಪರಿಕಲ್ಪನೆಯು ಕೇವಲ ಭೌಗೋಳಿಕ ಅಥವಾ ರಾಜಕೀಯ ನೆಲೆಗಳಿಗೆ ಸೀಮಿತವಾಗಿಲ್ಲ. ಭೌಗೋಳಿಕ ಮತ್ತು ರಾಜಕೀಯ ಕರ್ನಾಟಕವನ್ನು ಒಪ್ಪಿಕೊಂಡೇ, ಅದನ್ನು ಮೀರಿದ ವಿಶಾಲವಾದ ಸಾಂಸ್ಕೃತಿಕ ಕರ್ನಾಟಕದ ಪರಿಕಲ್ಪನೆಯನ್ನು ಅವರು ಕಟ್ಟಿಕೊಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ 'ಕರ್ನಾಟಕ ರಾಜ್ಯೋದಯ ಶ್ರೀಗೀತೆ'ಯಲ್ಲಿ ಅವರು ಹೀಗೆ ಹೇಳಿದ್ದಾರೆ:

"ಬರಿಯ ಚದರಮೈಲಿಗಳಲ್ತು ಕರ್ನಾಟಕದ ದೇಶ ವಿಸ್ತೀರ್ಣಂ;
ನೆನೆ, ನೆನೆ, ಮನೋಮಯದ ಸಂಸ್ಕೃತಿಯ ಕೋಶ ವಿಸ್ತೀರ್ಣಮಂ,
ಮನೆಯದಿರು ಚದರಸಂವತ್ಸರದ ಶತಮಾನಗಳ ಕಾಲ ವಿಸ್ತೀರ್ಣಮಂ,

ಪ್ರಾಣಮಯ ಭಾವಪ್ರದೇಶ ವಿಸ್ತೀರ್ಣಮಂ
ಚಿದಾಕಾಶ ವಿಜ್ಞಾನ ವಿಸ್ತೀರ್ಣಮಂ!"

ಈ ಸಾಲುಗಳಲ್ಲಿ ಕರ್ನಾಟಕದ ವ್ಯಾಪ್ತಿಯನ್ನು ಕೇವಲ ಭೌಗೋಳಿಕ ಅಳತೆಯಿಂದ ನಿರ್ಧರಿಸಬಾರದು; ಅದರ ಭಾಷೆ, ಸಂಸ್ಕೃತಿ, ಇತಿಹಾಸ, ಭಾವನೆ ಮತ್ತು ಜ್ಞಾನಪರಂಪರೆಗಳ ಮೂಲಕ ಅರ್ಥೈಸಬೇಕು ಎಂಬ ವಿಶಾಲ ದೃಷ್ಟಿಕೋನ ವ್ಯಕ್ತವಾಗಿದೆ.

ಭಾಷಾ ಪ್ರಾಬಲ್ಯ ಮತ್ತು ತ್ರಿಭಾಷಾ ಸೂತ್ರದ ಕುರಿತು ಕುವೆಂಪು ಅವರ ನಿಲುವು

ಒಬ್ಬ ಮನುಷ್ಯ ಮತ್ತೊಬ್ಬ ಮನುಷ್ಯನ ಮೇಲೆ ನಡೆಸುವ ದಬ್ಬಾಳಿಕೆ ಮತ್ತು ಸರ್ವಾಧಿಕಾರದ ಧೋರಣೆಗಳನ್ನು ಕುವೆಂಪು ವಿರೋಧಿಸಿದಂತೆ, ಒಂದು ಭಾಷೆಯು ಮತ್ತೊಂದು ಭಾಷೆಯ ಮೇಲೆ ನಡೆಸುವ ಪ್ರಾಬಲ್ಯ ಮತ್ತು ಬಲವಂತದ ಹೇರಿಕೆಯನ್ನೂ ಅವರು ವಿರೋಧಿಸಿದ್ದಾರೆ. ಕನ್ನಡ ಭಾಷೆಯ ಮೇಲೆ ಅನ್ಯಭಾಷೆಗಳ ಪ್ರಭಾವ ಮತ್ತು ಅವುಗಳ ಪ್ರಾಬಲ್ಯದ ಕುರಿತು ಅವರು ತಮ್ಮ ಕವನಗಳಲ್ಲಿ ತೀವ್ರವಾದ ಕಳವಳವನ್ನು ವ್ಯಕ್ತಪಡಿಸಿದ್ದಾರೆ. ಸಂಸ್ಕೃತ, ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳ ಪ್ರಭಾವದಿಂದ ಕನ್ನಡ ಭಾಷೆಯ ಸ್ವತಂತ್ರ ಬೆಳವಣಿಗೆಗೆ ಅಡ್ಡಿಯಾಗಬಾರದು ಎಂಬುದು ಅವರ ಆಶಯವಾಗಿತ್ತು.

ತ್ರಿಭಾಷಾ ಸೂತ್ರದ ಕುರಿತು ತಮ್ಮ ವಿರೋಧವನ್ನು ವ್ಯಕ್ತಪಡಿಸುವ ಸಂದರ್ಭದಲ್ಲಿ ಅವರು 'ಬಲತ್ಕಾರದ ಭಾಷಾತ್ರಿಶೂಲ' ಎಂಬ ಕವನದಲ್ಲಿ ಹೀಗೆ ಹೇಳಿದ್ದಾರೆ:

"ಭಾಷಾ ತ್ರಿಶೂಲವೀ ತ್ರಿಭಾಷಾ ಸೂತ್ರ;
ಬಾಲಕರ ರಕ್ಷಿಸೈ, ಹೇ ತ್ರಿಣೇತ್ರ!
ಚೂರು ತಿಂಡಿಗೆ ಸಿಕ್ಕಿಸಿಹರೊ ಈ ಮೂರು ಗಾಳ;
ನುಂಗದಿದ್ದರೆ ಹಸಿವೆ; ನುಂಗಿದರೆ ಪ್ರಾಣಶೂಲ!"

ಈ ಸಾಲುಗಳ ಮೂಲಕ ಮಕ್ಕಳ ಮೇಲೆ ಅನಗತ್ಯವಾಗಿ ಭಾಷಾ ಕಲಿಕೆಯ ಹೊರೆ ಹೇರುವುದರಿಂದ ಉಂಟಾಗುವ ಪರಿಣಾಮಗಳನ್ನು ಕುವೆಂಪು ರೂಪಕಾತ್ಮಕವಾಗಿ ಚಿತ್ರಿಸಿದ್ದಾರೆ. ಅವರ ಪ್ರಕಾರ, ಮಾತೃಭಾಷೆಯೇ ಶಿಕ್ಷಣದ ಪ್ರಮುಖ ಮಾಧ್ಯಮವಾಗಬೇಕು. ಇತರ ಭಾಷೆಗಳ ಕಲಿಕೆಗೆ ಅವಕಾಶವಿರಬೇಕು; ಆದರೆ ಅವುಗಳ ಕಲಿಕೆ ಬಲವಂತದ ಹೇರಿಕೆಯಾಗಬಾರದು.

ಭಾರತದ ಬಹುಭಾಷಾ ವೈವಿಧ್ಯವನ್ನು ಗಮನದಲ್ಲಿಟ್ಟುಕೊಂಡು, ಮಾತೃಭಾಷೆಯ ಜೊತೆಗೆ ಮತ್ತೊಂದು ಭಾಷೆಯನ್ನು ಕಲಿಯುವ ಸ್ವಾತಂತ್ರ್ಯವನ್ನು ಅವರು ಪ್ರತಿಪಾದಿಸಿದ್ದಾರೆ. ಈ ಹಿನ್ನೆಲೆಯಲ್ಲಿ ತ್ರಿಭಾಷಾ ಸೂತ್ರದ ಅನುಷ್ಠಾನದ ಬಗ್ಗೆ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿ, ತಮಿಳುನಾಡಿನ ಭಾಷಾ ನೀತಿಯನ್ನೂ ಉಲ್ಲೇಖಿಸಿದ್ದಾರೆ. ಅವರ ದೃಷ್ಟಿಯಲ್ಲಿ ಭಾಷಾ ಕಲಿಕೆಯು ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಸಹಕಾರಿಯಾಗಬೇಕೇ ಹೊರತು ಅವರ ಮೇಲೆ ಅನಗತ್ಯ ಒತ್ತಡ ಹೇರುವ ಸಾಧನವಾಗಬಾರದು.

ಸಂಸ್ಕೃತ ಭಾಷೆಯ ಮಹತ್ವವನ್ನು ಒಪ್ಪಿಕೊಂಡೇ ಅದರೊಂದಿಗೆ ಕನ್ನಡದ ಸ್ವತಂತ್ರ ಅಸ್ಮಿತೆಯೂ ಉಳಿಯಬೇಕೆಂಬ ಆಶಯವನ್ನು ಕುವೆಂಪು ಅವರು 'ಸಂಸ್ಕೃತಮಾತೆ' ಕವನದಲ್ಲಿ ವ್ಯಕ್ತಪಡಿಸಿದ್ದಾರೆ:

"ಹೇ ದಿವ್ಯ ಸಂಸ್ಕೃತ ಹಿಮಾಚಲವೆ
ಗಗನ ಚುಂಬಿತವಾಗಿ ಬೆಳೆದು ನೀ ನಿಂತಿರುವೆ
ಸ್ಥಿರತೆಯದು ಸಾವಲ್ಲ, ಜೀವಿತ ಚರಮಲಕ್ಷ್ಯ!
ಬೆಳೆಯುತಿಹ ನಿನ್ನೀ ಹಸುಳೆಗಳಿಗೆ ತಾವ ಕೊಡು,
ಹರಕೆಗೈ, ಸ್ತನ್ಯಪಾನವ ನೀಡು, ಹೇ ಜನನಿ!"

ಇಲ್ಲಿ ಸಂಸ್ಕೃತ ಭಾಷೆಯ ಹಿರಿಮೆಯನ್ನು ಗೌರವಿಸುತ್ತಲೇ, ಬೆಳೆಯುತ್ತಿರುವ ಕನ್ನಡದಂತಹ ಭಾಷೆಗಳಿಗೆ ಅವಕಾಶ ಮತ್ತು ಪ್ರೋತ್ಸಾಹ ನೀಡಬೇಕೆಂಬ ಆಶಯ ವ್ಯಕ್ತವಾಗಿದೆ.

ಕನ್ನಡಿಗರು ತಮ್ಮ ತಾಯ್ನುಡಿಯ ಬಗ್ಗೆ ತೋರುವ ನಿರ್ಲಕ್ಷ್ಯವನ್ನು ಕುವೆಂಪು ತೀವ್ರವಾಗಿ ಖಂಡಿಸಿದ್ದಾರೆ. 'ಸಾಯುತಿದೆ ನಿಮ್ಮನುಡಿ, ಓ ಕನ್ನಡದ ಕಂದರಿರ' ಎಂಬ ಕವನದಲ್ಲಿ ಅವರು ಹೀಗೆ ಪ್ರಶ್ನಿಸುತ್ತಾರೆ:

"ಉತ್ತರದ ಕಾಶಿಯಲಿ ಕತ್ತೆ ಮಿಂದೈತರಲು
ದಕ್ಷಿಣದ ದೇಶಕದು ಕುದುರೆಯಹುದೆ?
ತಾಯಿತ್ತ ಮೊಲೆಹಾಲೆ ನಿಮ್ಮ ಮೈಗಾಗದಿರೆ
ಹೊತ್ತ ಹೊರೆ ಬಲಕಾರಿ ನೆತ್ತರಹುದೆ?"

ಈ ಪ್ರಶ್ನೆಗಳ ಮೂಲಕ ಕನ್ನಡಿಗರು ತಮ್ಮ ಭಾಷೆಯ ಮಹತ್ವವನ್ನು ಅರಿತುಕೊಳ್ಳಬೇಕು ಮತ್ತು ಅನ್ಯಭಾಷೆಗಳ ಪ್ರಭಾವಕ್ಕೆ ಒಳಗಾಗಿ ತಾಯ್ನುಡಿಯನ್ನು ನಿರ್ಲಕ್ಷಿಸಬಾರದು ಎಂಬ ಸಂದೇಶವನ್ನು ನೀಡಿದ್ದಾರೆ.

ಅಂತೆಯೇ, ಜಗತ್ತಿನ ಪ್ರಸಿದ್ಧ ಭಾಷೆಗಳ ಮುಂದೆ ಕನ್ನಡವನ್ನು ಕೀಳಾಗಿ ಕಾಣುವ ಮನೋಭಾವವನ್ನು ಅವರು ವಿರೋಧಿಸಿದ್ದಾರೆ. 'ಬಲತ್ಕಾರದ ಭಾಷಾತ್ರಿಶೂಲ' ಕವನದಲ್ಲಿ,

"ನೀನು ಅಂತರರಾಷ್ಟ್ರ ಕೀರ್ತಿಯಂ ಪೊತ್ತು
ಗರ್ಜಿಸುವ ಜಗತ್ ಪ್ರಸಿದ್ಧ ಹುಲಿಯೆ?
ಇದೆಕೊ ನಿನಗೆನ್ನ ಬೋ ಪರಾಕು!
ನಾನು ಅಜ್ಞಾತ ಅಖ್ಯಾತ ಅನಾಮಕ ಅಲ್ಪ
ಇಲಿಯೆ? ಇರಲಿ:
ಕನ್ನಡದ ಬೆನಕದೇರನ್ನೆಳೆವ ಈ ಧನ್ಯತೆಯೆ
ಸಾಕು!"

ಎಂದು ಹೇಳುವ ಮೂಲಕ ಕನ್ನಡ ಭಾಷೆಯ ಸೇವೆಯಲ್ಲಿಯೇ ತಮ್ಮ ಬದುಕಿನ ಸಾರ್ಥಕತೆಯನ್ನು ಕಂಡುಕೊಂಡಿದ್ದಾರೆ. ಕನ್ನಡದ ಹಿರಿಮೆ ಕೇವಲ ಜಾಗತಿಕ ಪ್ರಸಿದ್ಧಿಯಲ್ಲಿಲ್ಲ; ಕನ್ನಡಿಗರ ಬದುಕು, ಸಂಸ್ಕೃತಿ ಮತ್ತು ಆತ್ಮಗೌರವದಲ್ಲಿದೆ ಎಂಬುದು ಅವರ ನಿಲುವಾಗಿದೆ.

ಕನ್ನಡ ಮಾಧ್ಯಮ ಮತ್ತು ಮಾತೃಭಾಷಾ ಶಿಕ್ಷಣ

ಕುವೆಂಪು ಅವರ ಪ್ರಕಾರ, ಕರ್ನಾಟಕದಲ್ಲಿ ಕನ್ನಡವೇ ಪ್ರಥಮ ಭಾಷೆಯಾಗಿರಬೇಕು. ಕನ್ನಡಿಗರ ಶಿಕ್ಷಣ, ಆಡಳಿತ ಮತ್ತು ಸಾಂಸ್ಕೃತಿಕ ಬದುಕಿನಲ್ಲಿ ಕನ್ನಡಕ್ಕೆ ಸೂಕ್ತ ಸ್ಥಾನಮಾನ ದೊರೆಯಬೇಕು. ಬಲಿಷ್ಠ ಭಾರತ ನಿರ್ಮಾಣಕ್ಕೆ ಪ್ರಾದೇಶಿಕ ಭಾಷೆಗಳು ಮತ್ತು ಮಾತೃಭಾಷೆಗಳು ಭದ್ರ ಬುನಾದಿಯಾಗಿವೆ ಎಂಬುದು ಅವರ ದೃಢ ನಿಲುವಾಗಿತ್ತು.

ಕನ್ನಡ ಮಾಧ್ಯಮದ ಶಿಕ್ಷಣದ ಅಗತ್ಯವನ್ನು ವಿವರಿಸುವ ಸಂದರ್ಭದಲ್ಲಿ ಕುವೆಂಪು ಅವರು ಇಂಗ್ಲಿಷ್ ಮಾಧ್ಯಮದ ಬಲವಂತದ ಅನುಷ್ಠಾನದಿಂದ ಮಕ್ಕಳ ಬೌದ್ಧಿಕ ಬೆಳವಣಿಗೆಗೆ ತೊಂದರೆಯಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ಸಂದರ್ಭದಲ್ಲಿ ಗಾಂಧೀಜಿಯವರ ಮಾತುಗಳೂ ಪ್ರಸ್ತುತವಾಗುತ್ತವೆ. ನಮ್ಮದಲ್ಲದ ಪರಭಾಷೆಯ ಮೂಲಕ ಶಿಕ್ಷಣ ಮತ್ತು ಕಲಿಕೆ ನಡೆಯುವುದರಿಂದ ಮಕ್ಕಳ ಸ್ವಾಭಾವಿಕ ಬುದ್ಧಿಶಕ್ತಿ, ಪ್ರತಿಭೆ ಮತ್ತು ಸೃಜನಶೀಲತೆಗೆ ಅಡ್ಡಿಯಾಗಬಹುದು ಎಂಬುದು ಗಾಂಧೀಜಿಯವರ ಅಭಿಪ್ರಾಯವಾಗಿತ್ತು.

ಕುವೆಂಪು ಮತ್ತು ಗಾಂಧೀಜಿಯವರ ಈ ಚಿಂತನೆಗಳು ಇಂದಿನ ಶಿಕ್ಷಣ ಮತ್ತು ಕಲಿಕಾ ವ್ಯವಸ್ಥೆಯನ್ನು ಮರುಪರಿಶೀಲಿಸಲು ಪ್ರೇರಣೆ ನೀಡುತ್ತವೆ. ಮಾತೃಭಾಷೆಯ ಮೂಲಕ ಶಿಕ್ಷಣ ದೊರೆತಾಗ ಮಕ್ಕಳು ವಿಷಯವನ್ನು ಸುಲಭವಾಗಿ ಗ್ರಹಿಸುವುದರ ಜೊತೆಗೆ ತಮ್ಮ ಪರಿಸರ, ಸಂಸ್ಕೃತಿ ಮತ್ತು ಸಾಮಾಜಿಕ ಬದುಕಿನೊಂದಿಗೆ ಗಾಢವಾದ ಸಂಬಂಧವನ್ನು ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ.

1965ರಲ್ಲಿ ರಾಷ್ಟ್ರಕವಿ ಪ್ರಶಸ್ತಿಯನ್ನು ಸ್ವೀಕರಿಸಿದ ಸಂದರ್ಭದಲ್ಲಿ ಕುವೆಂಪು ಅವರು ಶಾಸಕರನ್ನು ಉದ್ದೇಶಿಸಿ ಕನ್ನಡ ಮಾಧ್ಯಮ ಮತ್ತು ಇಂಗ್ಲಿಷ್ ಮಾಧ್ಯಮದ ಕುರಿತು ತಮ್ಮ ಕಳವಳವನ್ನು ವ್ಯಕ್ತಪಡಿಸಿದ್ದರು. ಆ ಸಂದರ್ಭದಲ್ಲಿ ಅವರು,

"ಅಧಿಕೃತ ಶಾಸನಕರ್ತರಾದ ನಿಮ್ಮಲ್ಲಿ ಅನಧಿಕೃತ ಶಾಸನಕರ್ತನಾದ ನನ್ನ ಒಂದು ಅಹವಾಲು. ನಮ್ಮ ದೇಶದ ಪ್ರಚ್ಛನ್ನ ಶತ್ರುಗಳಾದ ಸ್ವಾರ್ಥಸಾಧಕ ಪಟ್ಟಭದ್ರ ಹಿತಾಸಕ್ತಿ ಪ್ರತಿಗಾಮಿ ಶಕ್ತಿಗಳು, ಮಕ್ಕಳಿಗೆ ಹಾಲುಣಿಸುವ ನೆಪದಿಂದ ಅವರನ್ನು ಕೊಲ್ಲುತ್ತಿದ್ದ ಭಾಗವತ ಪುರಾಣದ ಪೂತನಿಯಂತೆ ಬಲಾತ್ಕಾರದ ಇಂಗ್ಲಿಷ್ ಭಾಷೆಯಿಂದಲೂ, ಇಂಗ್ಲಿಷ್ ಮಾಧ್ಯಮದಿಂದಲೂ ವರ್ಷವರ್ಷವೂ ಪರೀಕ್ಷೆಯ ಗಿಲೋಟಿನ್ನಿಗೆ ಕೋಟ್ಯಾಂತರ ಬಾಲಕರ ಮತ್ತು ತರುಣರ ತಲೆಗಳನ್ನು ಬಲಿ ಕೊಡುತ್ತಿದ್ದಾರೆ. ಇದರ

ದುಷ್ಪರಿಣಾಮ ದೃಗ್ಗೋಚರವಾಗುವ ಮಟ್ಟಕ್ಕೇರಲು ಸ್ವಲ್ಪ ದೀರ್ಘಕಾಲ ಹಿಡಿಯುವುದರಿಂದ ನಾವು ಹುಸಿ ನೆಮ್ಮದಿಯ ಭಾವದಲ್ಲಿ ಈಗಾಗಲೇ ಎಚ್ಚರಗೊಳ್ಳದೆ ತಟಸ್ಥರಾಗಿದ್ದರೆ ಮುಂದೆ ಮಹಾ ಪಶ್ಚಾತ್ತಾಪಕ್ಕೆ ಬಲಿಯಾಗಬೇಕಾಗುತ್ತದೆ" ಎಂದು ಎಚ್ಚರಿಸಿದ್ದರು.

ಈ ಹೇಳಿಕೆಯಲ್ಲಿ ಇಂಗ್ಲಿಷ್ ಭಾಷೆಯ ಕಲಿಕೆಯನ್ನು ಸಂಪೂರ್ಣವಾಗಿ ನಿರಾಕರಿಸುವುದಕ್ಕಿಂತ, ಅದರ ಬಲವಂತದ ಹೇರಿಕೆ ಮತ್ತು ಇಂಗ್ಲಿಷ್ ಮಾಧ್ಯಮದ ಮೂಲಕ ಮಕ್ಕಳ ಮೇಲೆ ಉಂಟಾಗುವ ಒತ್ತಡವನ್ನು ಕುವೆಂಪು ವಿರೋಧಿಸಿರುವುದು ಸ್ಪಷ್ಟವಾಗುತ್ತದೆ. ಶಿಕ್ಷಿತರಾಗುವುದೆಂದರೆ ಕನ್ನಡದಿಂದ ದೂರ ಸರಿಯಬೇಕು ಎಂಬ ಮನೋಭಾವವು ಸಮಾಜದಲ್ಲಿ ಬೇರೂರಿರುವುದನ್ನು ಅವರು ಒಪ್ಪಲಿಲ್ಲ. ಶಿಕ್ಷಣವು ಮಕ್ಕಳ ಸ್ವಾಭಾವಿಕ ಪ್ರತಿಭೆ, ಸೃಜನಶೀಲತೆ ಮತ್ತು ಬೌದ್ಧಿಕ ಸಾಮರ್ಥ್ಯವನ್ನು ಬೆಳೆಸುವಂತಿರಬೇಕು ಎಂಬುದು ಅವರ ಆಶಯವಾಗಿತ್ತು.

ಕುವೆಂಪು ಅವರ ಶಿಕ್ಷಣದ ಕುರಿತಾದ ಚಿಂತನೆಗಳು ದೇಸೀ ಸಂಸ್ಕೃತಿಯ ಮಹತ್ವವನ್ನು ಎತ್ತಿಹಿಡಿಯುತ್ತವೆ. ಆದರೆ ಅವು ವಸಾಹತುಶಾಹಿ ಮನೋಭಾವವಾಗಲಿ ಅಥವಾ ಯಾವುದೇ ಭಾಷೆಯ ಕುರುಡು ಆರಾಧನೆಯಾಗಲಿ ಅಲ್ಲ. ಬದಲಾಗಿ, ಮಾತೃಭಾಷೆಗೆ ಸೂಕ್ತ ಸ್ಥಾನಮಾನ ದೊರೆಯಬೇಕು ಮತ್ತು ಇತರ ಭಾಷೆಗಳನ್ನು ಕಲಿಯುವ ಅವಕಾಶವೂ ಸ್ವತಂತ್ರವಾಗಿ ಇರಬೇಕು ಎಂಬ ಸಮತೋಲನದ ನಿಲುವನ್ನು ಒಳಗೊಂಡಿವೆ.

ಕನ್ನಡ ಭಾಷೆಯ ಸ್ಥಾನಮಾನ ಮತ್ತು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಮಾಧ್ಯಮದ ಅನುಷ್ಠಾನ

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ ಸಂದರ್ಭದಲ್ಲಿ ಕುವೆಂಪು ಅವರು ಕನ್ನಡ ಮಾಧ್ಯಮದ ಅನುಷ್ಠಾನಕ್ಕೆ ವಿಶೇಷ ಆದ್ಯತೆ ನೀಡಿದರು. ಕನ್ನಡ ಭಾಷೆಗೆ ಉನ್ನತ ಶಿಕ್ಷಣದಲ್ಲಿಯೂ ಸ್ಥಾನಮಾನ ದೊರೆಯಬೇಕು ಎಂಬ ಉದ್ದೇಶದಿಂದ ಅವರು ದೃಢವಾದ ಕ್ರಮಗಳನ್ನು ಕೈಗೊಂಡರು. ಕನ್ನಡದ ವಿಷಯದಲ್ಲಿ ತಮ್ಮ ನಿಲುವನ್ನು ಸ್ಪಷ್ಟಪಡಿಸುತ್ತಾ, ಸೆನೆಟ್ ಸಭೆಯೊಂದರಲ್ಲಿ,

"ಕನ್ನಡ ವಿಷಯದಲ್ಲಿ ನಾನು ಟ್ಯಾಂಕಿನಂತೆ ಮುನ್ನುಗ್ಗುತ್ತೇನೆ. ನೀವು ದಾರಿ ಬಿಟ್ಟುಕೊಟ್ಟಿರೋ ಸರಿ, ಇಲ್ಲವೋ ಅಪ್ಪಚ್ಚಿಯಾಗುತ್ತೀರಿ" ಎಂದು ಹೇಳಿದ್ದಾಗಿ ಉಲ್ಲೇಖಿಸಲಾಗಿದೆ. ಈ ಮಾತು ಕನ್ನಡ ಮಾಧ್ಯಮದ ಅನುಷ್ಠಾನದ ಬಗ್ಗೆ ಅವರಿಗಿದ್ದ ಬದ್ಧತೆ ಮತ್ತು ದೃಢಸಂಕಲ್ಪವನ್ನು ಸೂಚಿಸುತ್ತದೆ.

ಕನ್ನಡ ಭಾಷೆಗೆ ಜಗತ್ತಿನಾದ್ಯಂತ ಮಾನ್ಯತೆ ದೊರೆಯಬೇಕಾದರೆ ಮೊದಲು ಕರ್ನಾಟಕದಲ್ಲಿಯೇ ಅದಕ್ಕೆ ಸೂಕ್ತ ಸ್ಥಾನಮಾನ ದೊರೆಯಬೇಕು ಎಂಬುದು ಕುವೆಂಪು ಅವರ ನಿಲುವಾಗಿತ್ತು. ಈ ಕುರಿತು ಅವರು, "ಕನ್ನಡಕ್ಕೆ ಪ್ರಪಂಚದಲ್ಲಿ ಎಲ್ಲಾದರೂ ಮಾನ್ಯಸ್ಥಾನ ದೊರೆಯಬೇಕಾದರೆ ಅದು ಇಲ್ಲಿ ಕರ್ನಾಟಕದಲ್ಲೇ, ಇನ್ನೆಲ್ಲಿಯೂ ಅಲ್ಲ. ನೀವು ಇಲ್ಲಿ ಕನ್ನಡಕ್ಕೆ, ಕನ್ನಡದವರಿಗೆ ಎಡೆ ಕೊಡದಿದ್ದರೆ, ಸ್ಥಾನಮಾನ ಕೊಡದಿದ್ದರೆ ಜಗತ್ತಿನ ಮತ್ಯಾವ ಭಾಗವೂ ಕನ್ನಡದ ಕೈ ಹಿಡಿಯುವುದಿಲ್ಲ" ಎಂದು ಅಭಿಪ್ರಾಯಪಟ್ಟಿದ್ದಾರೆ. ಕನ್ನಡ ಭಾಷೆಯ ಅಭಿವೃದ್ಧಿಯ ಹೊಣೆಗಾರಿಕೆ ಮುಖ್ಯವಾಗಿ ಕನ್ನಡಿಗರ ಮೇಲಿದೆ ಎಂಬುದನ್ನು ಈ ಮಾತುಗಳು ಸ್ಪಷ್ಟಪಡಿಸುತ್ತವೆ.

ಕನ್ನಡ ನಾಡಿನ ಏಕತೆ ಮತ್ತು ಭಾಷಾ ಸ್ವಾಭಿಮಾನದ ಕುರಿತು ಕುವೆಂಪು ಅವರು ತಮ್ಮ ಕಾವ್ಯದಲ್ಲಿಯೂ ಪ್ರೇರಣಾದಾಯಕ ಸಂದೇಶ ನೀಡಿದ್ದಾರೆ:

"ದೀಕ್ಷೆಯ ತೊಡು ಇಂದೆ
ಕಂಕಣ ಕಟ್ಟಿಂದೇ!
ಕನ್ನಡ ನಾಡೊಂದೇ
ಇನ್ನೆಂದೂ ತಾನೊಂದೆ!
ಕನ್ನಡ ನಾಡೊಂದಾಗದೆ ಮಾಣೆ
ತೊಡು ದೀಕ್ಷೆಯ, ಇಡು ರಕ್ಷೆಯ,
ಕಂಕಣಕಟ್ಟಿಂದೇ!"

ಈ ಸಾಲುಗಳು ಕನ್ನಡಿಗರಲ್ಲಿ ನಾಡು–ನುಡಿಯ ಬಗ್ಗೆ ಜಾಗೃತಿ, ಏಕತೆ ಮತ್ತು ಸೇವಾ ಮನೋಭಾವವನ್ನು ಮೂಡಿಸುವ ಆಶಯವನ್ನು ಹೊಂದಿವೆ. ಕನ್ನಡದ ಅಭಿವೃದ್ಧಿಗಾಗಿ ಪ್ರತಿಯೊಬ್ಬರೂ ತಮ್ಮಿಂದಾದ ಕೊಡುಗೆಯನ್ನು ನೀಡಬೇಕು ಎಂಬ ಸಂದೇಶವನ್ನು ಅವು ಸಾರುತ್ತವೆ.

ಕನ್ನಡದ ಅಸ್ಮಿತೆ ಮತ್ತು ಕುವೆಂಪು ಅವರ ಭಾಷಾ ಪ್ರಜ್ಞೆ

ಕುವೆಂಪು ಅವರಿಗೆ ಕನ್ನಡವೆಂಬುದು ಕೇವಲ ಸಂವಹನದ ಮಾಧ್ಯಮವಾಗಿರಲಿಲ್ಲ. ಅದು ಕನ್ನಡಿಗರ ಸಾಂಸ್ಕೃತಿಕ ಅಸ್ಮಿತೆ, ಬದುಕಿನ ಶಕ್ತಿ ಮತ್ತು ಆತ್ಮಗೌರವದ ಸಂಕೇತವಾಗಿತ್ತು. ಕನ್ನಡ ಭಾಷೆಯ ಮಹತ್ವವನ್ನು ಸಾರುತ್ತಾ ಅವರು,

"ಬಾಳುವುದೇತಕೆ? ನುಡಿ ಎಲೆ ಜೀವ,
ಸಿರಿಗನ್ನಡದಲ್ಲಿ ಕವಿತೆಯ ಹಾಡೆ,
ಸಿರಿಗನ್ನಡದೇಳಿಗೆಯನು ನೋಡೆ,
ಕನ್ನಡ ತಾಯಿಯ ಸೇವೆಯ ಮಾಡೆ"

ಎಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಕನ್ನಡ ಭಾಷೆಯ ಸೇವೆಯೇ ಬದುಕಿನ ಸಾರ್ಥಕತೆ ಎಂಬ ಭಾವನೆ ಅವರಲ್ಲಿ ಪ್ರಬಲವಾಗಿತ್ತು.

ಕನ್ನಡದ ಬಗ್ಗೆ ಕುವೆಂಪು ಅವರಿಗಿದ್ದ ಪ್ರೀತಿ ಮತ್ತು ಕಾಳಜಿಯನ್ನು ವ್ಯಕ್ತಪಡಿಸುವ ಸಂದರ್ಭದಲ್ಲಿ ಸಿದ್ಧಯ್ಯ ಪುರಾಣಿಕರ ಈ ಸಾಲುಗಳೂ ಗಮನಾರ್ಹವಾಗಿವೆ:

"ಹಸನು ಮಾಡಿದ ಹೊಲದಿ ಕಸವ ಬೆಳೆಸುವರಿಲ್ಲಿ
ಹೆರರ ದನಗಳಿಗೆಂದು ಹುಲ್ಲು ಬೆಳೆಸುವರಿಲ್ಲಿ
ಕನ್ನಡ ಜನಪದಕ್ಕೆ ಅನ್ನ ಸಿಗದಿರುವಾಗ
ಅನ್ಯ ನಾಡಿನ ಜನಕೆ ಹಣ್ಣು ಕಳಿಸುವರಿಲ್ಲಿ"

ಈ ಸಾಲುಗಳು ಕನ್ನಡ ಭಾಷೆ ಮತ್ತು ಕನ್ನಡಿಗರ ಹಿತಾಸಕ್ತಿಗಳ ಕಡೆಗೆ ಹೆಚ್ಚಿನ ಗಮನ ನೀಡಬೇಕಾದ ಅಗತ್ಯವನ್ನು ನೆನಪಿಸುತ್ತವೆ.

ಕನ್ನಡ ಭಾಷೆಯ ಬಗ್ಗೆ ಕುವೆಂಪು ಅವರಿಗಿದ್ದ ಗಾಢವಾದ ಭಾವನೆಯನ್ನು ಕೆಳಗಿನ ಸಾಲುಗಳು ಇನ್ನಷ್ಟು ಸ್ಪಷ್ಟಪಡಿಸುತ್ತವೆ:

"ಕನ್ನಡವೆಂಬುದು ಬರಿಯ ಹೆಸರೆ ಮಣ್ಣಿಗೆ ಅಲ್ಲು
ಅದೊಂದು ಶಕ್ತಿ ಕಣಾ, ಮಂತ್ರ ಕಣಾ!"

ಕನ್ನಡ ಭಾಷೆಯನ್ನು ಒಂದು ಜೀವಂತ ಸಾಂಸ್ಕೃತಿಕ ಶಕ್ತಿಯಾಗಿ ಅವರು ಕಂಡಿದ್ದರು. ಕನ್ನಡದ ಬೆಳವಣಿಗೆ ಎಂದರೆ ಕನ್ನಡಿಗರ ಸಾಮಾಜಿಕ, ಸಾಂಸ್ಕೃತಿಕ ಮತ್ತು ಬೌದ್ಧಿಕ ಬೆಳವಣಿಗೆಯೂ ಹೌದು ಎಂಬುದು ಅವರ ಚಿಂತನೆಯ ಸಾರವಾಗಿದೆ.

ಕುವೆಂಪು ಅವರು ಯಾವುದೇ ಭಾಷೆಯ ವಿರೋಧಿಯಾಗಿರಲಿಲ್ಲ. ಆದರೆ ಒಂದು ಭಾಷೆಯನ್ನು ಮತ್ತೊಂದು ಭಾಷೆಯ ಮೇಲೆ ಬಲವಂತವಾಗಿ ಹೇರುವುದನ್ನು ಅವರು ವಿರೋಧಿಸಿದರು. ಸಾಮ್ರಾಜ್ಯಶಾಹಿ ಮನೋಭಾವ ಮತ್ತು ಭಾಷಾ ಪ್ರಾಬಲ್ಯದ ಧೋರಣೆಗಳನ್ನು ಅವರು ಖಂಡಿಸಿದರು. 'ನಮಗೆ ಬೇಕಾಗಿರುವ ಇಂಗ್ಲಿಷ್' ಎಂಬ ಲೇಖನದಲ್ಲಿ ಇಂಗ್ಲಿಷ್ ಭಾಷೆಯ ಅಗತ್ಯ, ಅದರ ಕಲಿಕೆಯ ವಿವಿಧ ಹಂತಗಳು ಮತ್ತು ಅದರ ಸೂಕ್ತ ಅನುಷ್ಠಾನದ ಕುರಿತು ಸುದೀರ್ಘವಾಗಿ ಚರ್ಚಿಸಿದ್ದಾರೆ. ಇಂಗ್ಲಿಷ್ ಭಾಷೆಯನ್ನು ಕಲಿಯುವುದಕ್ಕೆ ಅವರು ವಿರೋಧಿಯಾಗಿರಲಿಲ್ಲ; ಆದರೆ ಇಂಗ್ಲಿಷ್ ಭಾಷೆಯ ಕಲಿಕೆಯು ಕನ್ನಡದ ಬೆಳವಣಿಗೆಗೆ ಅಡ್ಡಿಯಾಗಬಾರದು ಎಂಬುದು ಅವರ ನಿಲುವಾಗಿತ್ತು.

ಅನುವಾದ ಮತ್ತು ರೂಪಾಂತರಗಳ ಮೂಲಕ ಕನ್ನಡ ಸಾಹಿತ್ಯ ಹಾಗೂ ಭಾಷಾ ಸಂಸ್ಕೃತಿಯನ್ನು ಪರಿಪುಷ್ಟಗೊಳಿಸಬೇಕೆಂಬ ಆಶಯವನ್ನೂ ಅವರು ಹೊಂದಿದ್ದರು. ಜಗತ್ತಿನ ವಿವಿಧ ಭಾಷೆಗಳಲ್ಲಿರುವ ಜ್ಞಾನ, ಸಾಹಿತ್ಯ ಮತ್ತು ವಿಜ್ಞಾನವನ್ನು ಕನ್ನಡಕ್ಕೆ ತರುವ ಮೂಲಕ ಕನ್ನಡ ಭಾಷೆಯ ಅಭಿವ್ಯಕ್ತಿ ಸಾಮರ್ಥ್ಯವನ್ನು ವಿಸ್ತರಿಸಬಹುದು ಎಂಬ ದೃಷ್ಟಿಕೋನ ಅವರ ಚಿಂತನೆಗಳಲ್ಲಿ ಕಾಣುತ್ತದೆ.

ಉಪಸಂಹಾರ

ಕುವೆಂಪು ಅವರ ಭಾಷಾ ಚಿಂತನೆಗಳು ಕನ್ನಡ ಭಾಷೆಯ ಅಸ್ತಿತ್ವ, ಸ್ವಾಭಿಮಾನ, ಸಾಂಸ್ಕೃತಿಕ ವೈಶಿಷ್ಟ್ಯ ಮತ್ತು ಶಿಕ್ಷಣದ ಮಾಧ್ಯಮವಾಗಿ ಅದರ ಮಹತ್ವವನ್ನು ಪ್ರತಿಪಾದಿಸುತ್ತವೆ. ಮಾತೃಭಾಷೆಯ ಮೂಲಕ ಶಿಕ್ಷಣ ದೊರೆಯಬೇಕು, ಕನ್ನಡಕ್ಕೆ ಆಡಳಿತ ಮತ್ತು ಉನ್ನತ ಶಿಕ್ಷಣದಲ್ಲಿ ಸೂಕ್ತ ಸ್ಥಾನಮಾನ ಸಿಗಬೇಕು ಹಾಗೂ ಕನ್ನಡಿಗರು ತಮ್ಮ ಭಾಷೆಯ ಅಭಿವೃದ್ಧಿಯ ಹೊಣೆಗಾರಿಕೆಯನ್ನು ಅರಿತುಕೊಳ್ಳಬೇಕು ಎಂಬುದು ಅವರ ಪ್ರಮುಖ ಆಶಯವಾಗಿತ್ತು. ಅವರು ಇಂಗ್ಲಿಷ್ ಸೇರಿದಂತೆ ಯಾವುದೇ ಭಾಷೆಯ ಕಲಿಕೆಯನ್ನು ವಿರೋಧಿಸಲಿಲ್ಲ. ಬದಲಾಗಿ, ಭಾಷಾ ಕಲಿಕೆಯು ಸ್ವತಂತ್ರ ಆಯ್ಕೆಯಾಗಿರಬೇಕು; ಬಲವಂತದ ಹೇರಿಕೆಯಾಗಬಾರದು ಎಂದು ಪ್ರತಿಪಾದಿಸಿದರು. ಕನ್ನಡದ ಬೆಳವಣಿಗೆಯು ಇತರ ಭಾಷೆಗಳ ವಿರೋಧದ ಮೇಲೆ ನಿಲ್ಲದೆ, ತನ್ನದೇ ಆದ ಜ್ಞಾನಸಂಪತ್ತು, ಸಾಹಿತ್ಯ, ಸಂಸ್ಕೃತಿ ಮತ್ತು ಸೃಜನಶೀಲತೆಯ ಬಲದಿಂದ ಸಾಧ್ಯವಾಗಬೇಕು ಎಂಬುದು ಅವರ ಚಿಂತನೆಯ ಆಶಯವಾಗಿದೆ. ಕುವೆಂಪು ಅವರು ಕನ್ನಡದ ಬಗ್ಗೆ ಹೊಂದಿದ್ದ ಪ್ರೀತಿ ಕೇವಲ ಭಾವನಾತ್ಮಕ ಅಭಿಮಾನಕ್ಕೆ ಸೀಮಿತವಾಗಿರಲಿಲ್ಲ. ಅದು ಕನ್ನಡ ಮಾಧ್ಯಮದ ಅನುಷ್ಠಾನ, ಕನ್ನಡದ ಶೈಕ್ಷಣಿಕ ಬೆಳವಣಿಗೆ, ಭಾಷಾ ಸ್ವಾಭಿಮಾನ ಮತ್ತು ಸಾಂಸ್ಕೃತಿಕ ಏಕತೆಯ ಮೂಲಕ ಕಾರ್ಯರೂಪಕ್ಕೆ ಬಂದಿತ್ತು. ಆದ್ದರಿಂದ ಕುವೆಂಪು ಅವರ ಭಾಷಾ ಚಿಂತನೆಗಳು ಇಂದಿನ ಕನ್ನಡ ಭಾಷಾ ಚಳವಳಿ, ಶಿಕ್ಷಣ ವ್ಯವಸ್ಥೆ ಮತ್ತು ಕನ್ನಡದ ಭವಿಷ್ಯದ ಕುರಿತ ಚರ್ಚೆಗಳಿಗೆ ಮಹತ್ವದ ಮಾರ್ಗದರ್ಶನ ನೀಡುತ್ತವೆ.

ಪರಾಮರ್ಶನ ಗ್ರಂಥಗಳು

- ಕುವೆಂಪು. *ಕುವೆಂಪು ಸಮಗ್ರ ಕಾವ್ಯ ಸಂಪುಟಗಳು.* (ಸಂ.ಡಾ.ಕೆ.ಸಿ.ಶಿವಾರೆಡ್ಡಿ.) ಕನ್ನಡ ವಿಶ್ವವಿದ್ಯಾಲಯ.
- ಕುವೆಂಪು. *ಕುವೆಂಪು ಸಮಗ್ರ ಗದ್ಯ ಸಂಪುಟಗಳು.* (ಸಂ.ಡಾ.ಕೆ.ಸಿ.ಶಿವಾರೆಡ್ಡಿ.) ಕನ್ನಡ ವಿಶ್ವವಿದ್ಯಾಲಯ.
- ಕುವೆಂಪು. *ಸಾಹಿತ್ಯ ಪ್ರಚಾರ.* ಉದಯರವಿ ಪ್ರಕಾಶನ.
- ಕುವೆಂಪು. *ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ.* ಉದಯರವಿ ಪ್ರಕಾಶನ.
- ಜವರೇಗೌಡ, ಡಿ. (ಸಂ.). *ಕುವೆಂಪು ದರ್ಶನ ಸಂಪುಟಗಳು.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಶಿವಾರೆಡ್ಡಿ, ಕೆ.ಸಿ. ಮತ್ತು ಸೋಮಶೇಖರ, ಎಸ್.ವೈ. (ಸಂ.). ಕುವೆಂಪು ವಿಚಾರಧಾರೆಯ ಪ್ರಸ್ತುತತೆ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.